ರಾಜ್ಯದಲ್ಲಿ 'ಹೊಸ ನಾಡ ಕಛೇರಿಗಳ' ಪ್ರಾರಂಭ

೨೩೭೨. ಶ್ರೀ ಕೆ.ಹೆಚ್. ರಾಮಕೃಷ್ಣಯ್ಯ (ತುರುವೇಕೆರೆ).—ಮಾನ್ಯ ಕಂದಾಯ, ಯೋಜನೆ, ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೮–೮೯ನೇ ಸಾಲಿನಲ್ಲಿ ರಾಜ್ಯದಲ್ಲಿ ೩೭೪ ನಾಡ ಕಛೇರಿಗಳನ್ನು ಪ್ರಾರಂಭಿಸಲು ೫.೦೦ ಕೋಟಿ ರೂಪಾಯಿಗಳನ್ನು ತೆಗೆದಿರಿಸುವುದಾಗಿ ರಾಜ್ಯಪಾಲರ ಭಾಷಣದಲ್ಲಿ ಸರ್ಕಾರ ಸೂಚನೆ ಮಾಡಿರುವುದು ನಿಜವೆ;

ಆ) ೧೯೮೭–೮೮ನೇ ಸಾಲಿನಲ್ಲಿ ಯೋಜನೆ ಹಾಕಿಕೊಂಡಿದ್ದ ಪ್ರಕಾರ ನಾಡ ಕಛೇರಿಗಳನ್ನು ಪ್ರಾರಂಭ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ) ಹಾಗಿದ್ದಲ್ಲಿ ೧೯೮೭–೮೮ ಮತ್ತು ೧೯೮೮–೮೯ನೇ ಸಾಲಿನಲ್ಲಿ ಅನುಕ್ರಮವಾಗಿ ತೆಗೆಯಬೇಕೆಂದು ಉದ್ದೇಶಿಸಲಾಗಿರುವ ನಾಡ ಕಛೇರಿಗಳನ್ನು ೧೯೮೮ನೇ ಜೂನ್ ೧ನೇ ತಾರೀಖಿನಿಂದ ಪ್ರಾರಂಭಿಸಲು ಸರ್ಕಾರದವರು ಕ್ರಮ ತೆಗೆದುಕೊಳ್ಳುವರೆ,

ಈ) ಹಾಗಿದ್ದಲ್ಲಿ ೧೯೮೮–೮೯ನೇ ಸಾಲಿನಲ್ಲಿ ಪ್ರಾರಂಭಿಸಲಾಗುವ ಒಟ್ಟು ನಾಡ ಕಛೇರಿಗಳು ಎಷ್ಟು, (ವಿವರ ನೀಡುವುದು).

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ನಿಜ.

ಆ) ಬಂದಿದೆ.

ಇ) ಹಣಕಾಸು ಪರಿಸ್ಥಿತಿ ನೋಡಿಕೊಂಡು ತೀರ್ಮಾನಿಸಲಾಗುವುದು.

ಈ) ೧೫೪. ಕಸಬಾ ಹೋಬಳಿ ಬಿಟ್ಟು ಎರಡು ಹೋಬಳಿಗಳಿಗಿಂತ ಹೆಚ್ಚಿಗೆ ಹೋಬಳಿಗಳಿರುವ ಎಲ್ಲಾ ತಾಲ್ಲೂಕುಗಳ ಒಂದು ಹೋಬಳಿಯಲ್ಲಿ ನಾಡ ಕಛೇರಿ ಪ್ರಾರಂಭಿಸಲಾಗುವುದು.

ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಕಂದಾಯ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ನೌಕರರು

೨೭೧೬. ಶ್ರೀ ಆರ್. ಎನ್. ನಾಯಕ್ (ಭಟ್ಕಳ್).—ಮಾನ್ಯ ಕಂದಾಯ, ಹೋಜನೆ, ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಕಂದಾಯ ಇಲಾಖೆಯಲ್ಲಿ ಪ್ರತಿ ಗ್ರೂಪ್‌ನಲ್ಲಿ ಕೆಲಸ ಮಾಡುತ್ತಿರುವ ನೌಕರರ ಸಂಖ್ಯೆ ಎಷ್ಟು, ಖಾಲಿಯಿರುವ ನೌಕರರ ಉದ್ದೆಗಳ ಸಂಖ್ಯೆ ಎಷ್ಟು (ವಿವರ ಒದಗಿಸುವುದು),

ಆ) ಉತ್ತರ ಕನ್ನಡ ಜಿಲ್ಲೆಯಲ್ಲಿ ಹಂಟ್ಟ ತಾಲ್ಲೂಕಿನಲ್ಲಿಯೇ ಕೆಲಸ ಮಾಡುತ್ತಿರುವ ನೌಕರರು ಎಷ್ಟು, (ತಾಲ್ಲೂಕುವಾರು ವಿವರ ನೀಡುವುದು),

ಇ, ಜಿಲ್ಲೆಯಲ್ಲಿ ೭ ವರ್ಷಕ್ಕಿಂತ ಹೆಚ್ಚಿಗೆ ಸೇವೆ ಸಲ್ಲಿಸುತ್ತಿರುವ ನೌಕರರ ಸಂಖ್ಯೆ ಎಷ್ಟು, (ತಾಲ್ಲೂಕುವಾರು ಮತ್ತು ಹುದ್ದೆವಾರು ವಿವರ ನೀಡುವುದು),

ಈ) ಹೊನ್ನಾವರ ತಾಲ್ಲೂಕಿನ ತಹಶೀಲ್ದಾರ ಕಛೇರಿಯಲ್ಲಿ ೭ ವರ್ಷಕ್ಕಿಂತ ಹೆಚ್ಚಿಗೆ ಮತ್ತು ೧೦ ವರ್ಷಕ್ಕಿಂತ ಕಡಿಮೆ ಸೇವೆ ಸಲ್ಲಿಸಿ ಅದೇ ತಾಲ್ಲೂಕಿಗೆ ಸೇರಿದವರ ಸಂಖ್ಯೆ ಎಷ್ಟು, ಯಾವ ಹುದ್ದೆಯಲ್ಲಿದ್ದಾರೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನೆ, ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು).—

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ 'ಎ' ಶ್ರೇಣಿಯ ೮ ಅಧಿಕಾರಿಗಳು 'ಬಿ' ಶ್ರೇಣಿಯ ೧೨ ಅಧಿಕಾರಿಗಳು 'ಸಿ' ಶ್ರೇಣಿಯ ೪೭೧ ಅಧಿಕಾರಿಗಳು ಮತ್ತು 'ಡಿ' ಶ್ರೇಣಿಯ ೭೦ ನೌಕರರು ಕಾರ್ಯ

ನಿರ್ವಹಿಸುತ್ತಿದ್ದಾರೆ. ಹಾಗೂ 'ಎ' ಶ್ರೇಣಿಯ ೪ ಅಧಿಕಾರಿಗಳ ಹುದ್ದೆಗಳು 'ಬಿ' ಶ್ರೇಣಿಯ ೩ ಹುದ್ದೆಗಳು 'ಸಿ' ಶ್ರೇಣಿಯ ೧೬೬ ಹುದ್ದೆಗಳು ಹಾಗೂ 'ಡಿ' ಶ್ರೇಣಿಯ ೧೮ ಹುದ್ದೆಗಳು ಕಂದಾಯ ಇಲಾಖೆಯಲ್ಲಿ ಖಾಲಿಯಿವೆ. (ವಿವರಗಳನ್ನು ಲಗತ್ತಿಸಿದ ಅನುಬಂಧದಲ್ಲಿ ಒದಗಿಸಿದೆ.)

ಆ) ಉತ್ತರ ಕನ್ನಡ ಜಿಲ್ಲೆಯಲ್ಲಿ ಜನ್ಮ ಪಡೆದು ಸ್ವಂತ ಊರಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ 'ಎ' ಮತ್ತು 'ಬಿ' ಶ್ರೇಣಿಯ ಅಧಿಕಾರಿಗಳಾರೂ ಇಲ್ಲ. 'ಸಿ' ಶ್ರೇಣಿಯ ೭೮ ಅಧಿಕಾರಿಗಳು ಹಾಗೂ 'ಡಿ' ವೃಂದದ ೬೦ ಅಧಿಕಾರಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ. ತಾಲ್ಲೂಕುವಾರು ವಿವರವನ್ನು ಲಗತ್ತಿಸಿದೆ ಅನುಬಂಧದಲ್ಲಿ ಸೂಚಿಸಲಾಗಿದೆ.

ಇ) ಉತ್ತರ ಕನ್ನಡ ಜಿಲ್ಲೆಯ ಕಂದಾಯ ಇಲಾಖೆಯ 'ಸಿ' ಶ್ರೇಣಿಯ ೫ ಅಧಿಕಾರಿಗಳು ಮತ್ತು 'ಡಿ' ಶ್ರೇಣಿಯ ೨೫ ನೌಕರರು ಏಳು ವರ್ಷಗಳಿಗೂ ಹೆಚ್ಚು ಅವಧಿಯಲ್ಲಿ ಒಂದೇ ಸ್ಥಳದಲ್ಲಿಯೇ ಕಾರ್ಯ ನಿರ್ವಹಿಸುತ್ತಿದ್ದಾರೆ. ಹುದ್ದೆ ಮತ್ತು ತಾಲ್ಲೂಕುವಾರು ವಿವರಗಳನ್ನು ಲಗತ್ತಿಸಿದ ಅನುಬಂಧದಲ್ಲಿ ಒದಗಿಸಿದೆ.

ಈ) ಯಾರೂ ಇರುವುದಿಲ್ಲ,

ಚುಕ್ಕೆ ಗುರ್ತಿನ ಪ್ರಶ್ನೆ ಸಂಖ್ಯೆ ೨೭೧೬ ಕ್ಕೆ ಅನುಬಂಧ

ಅನುಬಂಧ

ತಾಲ್ಲೂಕು	ಗ್ರೂಪ್ 'ಎ'	ಗ್ರೂಪ್ 'ಬಿ'	ಗ್ರೂಪ್-ಸಿ								ಗ್ರೂಪ್-ಡಿ
			ಶಿರಸ್ತೆದಾರ ಉಪ ತಹಶೀಲದಾರರು	ಪ್ರ.ದ.ಸ ಪ್ರ.ಡ.ಕ ನಿ:	ದ್ವಿ.ದ.ಸ.	ಬೆರಳಚ್ಚುಗಾರರು	ಸ್ಟೆನೋ	ಗ್ರಾಮ ಲೆಕ್ಕಿಗ	ಕ್ಲರ್ಕ ಕಂ. ಟೈಪಿಸ್ಟ್	ವಾಹನ ಚಾಲಕ	
೧	೨	೩	೪	೫	೬	೭	೮	೯	೧೦	೧೧	೧೨
ಉತ್ತರ ಕನ್ನಡ ಜಿಲ್ಲೆಯಲ್ಲಿ ಕಂದಾಯ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ											
ಕಾರವಾರ	೬	೩	೧೫	೩೩	೩೫	೮	೧	೨೪	...	೭	೨೬
ಅಂಕೋಲ	...	೧	೩	೮	೪	೧	...	೧೬	...	೧	೬
ಕುಮಟಾ	...	೧	೨	೯	೧೦	೨	...	೨೮	...	೨	೬
ಹೊನ್ನಾವರ	...	೧	೩	೭	೯	೧	...	೩೩	...	೧	೬
ಭಟ್ಕಳ	..	೧	೩	೧	೩	೧	...	೧೩	...	೧	೩
ಸಿದ್ದಾಪುರ	...	೧	೩	೫	೬	...	...	೨೧	...	೧	೫
ಶಿರ್ಸಿ	೨	೧	೪	೧೪	೯	೨	...	೨೮	...	೨	೧೧
ಮುಂಡಗೋಡ	...	...	೨	೩	೪	೧	...	೯	...	...	೫
ಯಲ್ಲಾಪುರ	...	೧	೨	೬	೫	೧	...	೧೪	...	೧	೩
ಹಳಿಯಾಳ	...	೧	೩	೭	೫	೧	...	೧೫	...	...	೬
ಸೂಪಾ	...	೧	೧	೪	೩	೧	...	೧೨	...	೧	೩
	೮	೧೨	೪೧	೯೭	೯೩	೧೯	೧	೨೦೩	...	೧೭	೭೦

ಉತ್ತರ ಕನ್ನಡ ಜಿಲ್ಲೆಯಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ

ಕಾರವಾರ	೨	೩	...	೭	೧	೬	೫	೧೩	೧	...	೯
ಅಂಕೋಲ	...	...	...	...	೧	...	...	೧೫	೧	...	...
ಕುಮಟಾ	೧	...	೧	೧	೨	...	೧	೧೭	೧	...	...
ಹೊನ್ನಾವರ	...	...	...	೨	೧	...	...	೧೧	೧	...	೧
ಬಟ್ಕಳ	...	...	...	೧	೨	...	...	೧೦	೧	...	೨
ಸಿದ್ದಾಪುರ	...	...	...	...	೧	...	...	೧೦	೧	...	೧
ಸಿರ್ಸಿ	೧	...	೧	...	೪	೩	೨	೭	೧	...	೨
ಮುಂಡಗೋಡ	...	...	...	೩	೨	...	...	೩	೧	...	೧
ಯಲ್ಲಾಪುರ	...	...	೧	...	೨	...	...	೫	೧	...	...
ಹಳಿಯಾಳ	...	...	...	...	೧	...	...	೬	೧	೧	...
ಸೂಪಾ	...	...	೧	೧	೩	...	...	೪	೧	...	೨
	೪	೩	೪	೧೫	೨೦	೯	೮	೧೦೧	೧೧	೧	೧೮

ಉತ್ತರ ಕನ್ನಡ ಜಿಲ್ಲೆಯಲ್ಲಿ ಜನ್ಮ ಪಡೆದು ಸ್ವಂತ ಊರಿನಲ್ಲಿ ಕಾರ್ಯ ನಿರ್ವಹಿಸುತ್ತಿರುವವರ ಸಂಖ್ಯೆ

ಕಾರವಾರ	...	...	೨	೭	೬	೧	...	೧೪	...	೧	೨೫
ಅಂಕೋಲ	...	...	೧	೨	...	...	...	೬	...	...	೬
ಕುಮಟಾ	...	...	...	೨	೪	೧	...	೫	...	೧	೫
ಹೊನ್ನಾವರ	...	...	...	...	೪	...	...	೪	...	...	೪
ಭಟ್ಕಳ	...	...	...	...	೧	...	...	೨	...	...	೧
ಸಿದ್ದಾಪುರ	...	...	...	೧	೧	...	...	...	...	...	೧
ಸಿರ್ಸಿ	...	...	...	೧	...	...	...	೧	...	...	೪
ಮುಂಡಗೋಡಂ	...	...	...	...	...	...	...	...	...	...	೧
ಯಲ್ಲಾಪುರ	...	...	...	...	...	...	...	...	...	...	...
ಹಳಿಯಾಳ	...	...	೧	...	೨	...	...	೭	...	...	೧೨
ಸೂಪಾ	...	...	...	...	...	...	...	...	...	...	೧
	...	...	೪	೧೩	೧೮	೨	...	೩೯	..	೨	೬೦

ಒಂದೇ ಸ್ಥಳದಲ್ಲಿ ೭ ವರ್ಷಗಳಿಗೂ ಹೆಚ್ಚು ಅವಧಿಯಿಂದ ಸೇವೆ ಸಲ್ಲಿಸುತ್ತಿರುವವರ ಸಂಖ್ಯೆ

ಕಾರವಾರ	...	...	೨	೧	...	೨	...	...	...	...	೧೪
ಅಂಕೋಲಾ	...	...	...	...	...	...	...	...	...	...	...
ಕುಮಟಾ	...	...	...	...	...	...	...	...	...	...	೨
ಹೊನ್ನಾವರ	...	...	...	...	...	...	...	...	...	...	...
ಭಟ್ಕಳ	...	...	...	...	...	...	...	...	...	...	...
ಸಿದ್ದಾಪುರ	...	...	...	...	...	...	...	...	...	...	೧
ಸಿರ್ಸಿ	...	...	...	...	...	...	...	...	...	...	೪
ಮುಂಡಗೋಡು	...	...	...	...	...	...	...	...	...	...	...
ಯಲ್ಲಾಪುರ	...	...	...	...	...	...	...	...	...	...	೧
ಹಳಿಯಾಳ	...	...	...	...	...	...	...	...	...	...	೨
ಸೂಪಾ	...	...	...	...	...	...	...	...	...	...	...
	...	...	೨	೧	...	೨	...	...	...	...	೨೫